◆ **ನಿಮ್ಮ 'ಸನಾತನ' ಕಾದಂಬರಿಯಲ್ಲಿ ಸಾಂಸ್ಕೃತಿಕ ಸಂಘರ್ಷವಿದೆ. ಭೀಮಾ ಕೋರೆಗಾಂವ್‌ನ ಚಾರಿತ್ರಿಕ ಹಿನ್ನೆಲೆಯಲ್ಲಿ ದಲಿತರ–ಆದಿವಾಸಿಗಳ, ಮುಸ್ಲಿಂ–ಬ್ರಾಹ್ಮಣರ–ಕ್ರೈಸ್ತರ ಜಾತಿ ಸಂಘರ್ಷವನ್ನು ಚಿತ್ರಿಸುವ ಮೂಲಕ ನೀವು ಏನು ಹೇಳಲು ಹೊರಟಿದ್ದೀರಿ?**

'ಸನಾತನ' ಕಾದಂಬರಿ ಬರೆಯುವಾಗ ಮಹಾರ ಸಮಾಜ ಹಾಗೂ ಭೀಮಾ ಕೋರೆಗಾಂವ್ ಹೋರಾಟ ಮಾತ್ರ ನನ್ನ ಕಣ್ಣೆದುರಿಗಿತ್ತು. ಬರಬರುತ್ತ ಬುಡಕಟ್ಟು, ಮುಸ್ಲಿಂ, ಬ್ರಾಹ್ಮಣ ಸಮುದಾಯವೂ ಅದರಲ್ಲಿ ಸೇರಿಕೊಂಡಿತು. ದಲಿತರು–ಆದಿವಾಸಿಗಳು ಒಂದಾಗಬೇಕೆಂದು ನನಗನಿಸುತ್ತದೆ. ಅವೆರಡೂ ಭಾಷಿಕವಾಗಿ–ಸಾಂಸ್ಕೃತಿಕವಾಗಿ ಭಿನ್ನ ಭಿನ್ನವಾಗಿದ್ದರೂ ಎರಡೂ ಸಾಹಿತ್ಯವನ್ನು ಕೂಡಿಯೇ ಚರ್ಚಿಸುವುದನ್ನು ಕಾಣುತ್ತೇವೆ. ಸೋತ ವರ್ಗದವರೆಲ್ಲ ಒಗ್ಗೂಡಿ, ವಿಷಮತೆಯ ವಿರುದ್ಧ ಹೋರಾಡಬೇಕು ಎಂದೇ ನನ್ನ ಭಾವನೆ. ಸರ್ವ ಉಪೇಕ್ಷಿತ ಸಾಹಿತ್ಯ ಪ್ರವಾಹ ಒಂದಾಗಬೇಕು.

◆ **ಹಿಂದೂ–ದಲಿತ ಹಾಗೂ ಹಿಂದೂ–ಮುಸ್ಲಿಂ ಸಂಘರ್ಷವನ್ನು ನೀವು ಹೇಗೆ ಪರಿಭಾವಿಸುತ್ತೀರಿ?**

ಭಾರತದಲ್ಲಿ ದಲಿತರ ಹಾಗೂ ಮುಸ್ಲಿಂರ ವಿರುದ್ಧ ಅತೀ ದೊಡ್ಡ ದಂಗೆಯಾಗಿದೆ. ಈಗೀಗ ಕ್ರೈಸ್ತರ ಹತ್ಯೆಯಾಗುತ್ತಲಿದೆ. ದಲಿತರು ಮುಸ್ಲಿಂರ ಪರವಾಗಿ ನಿಲ್ಲುವುದಿಲ್ಲ. ಏಕೆಂದರೆ, ಹಿಂದೂಗಳ ರೋಷವನ್ನು ಎದುರಿಸಬೇಕಾದ ಭೀತಿಯಿರುತ್ತದೆ. ಮುಸ್ಲಿಂರಿಗೆ ದಲಿತರ ಜಾತಿ ಅಡ್ಡಿಯಾಗುವುದರಿಂದ ಅವರು ದಲಿತರ ಜೊತೆಗಿರುವುದಿಲ್ಲ. ದಲಿತ, ಮುಸ್ಲಿಂ, ಕ್ರೈಸ್ತರು ಸಮದುಃಖಿಗಳೆಂದು ನನ್ನ



"ವ್ಯವಸ್ಥೆಯನ್ನು ಅರಿಯದ ಹೊರತು ದಲಿತನನ್ನು ಅರಿಯುವುದು ಸಾಧ್ಯವಿಲ್ಲ. ದಲಿತ ಸಾಹಿತ್ಯ ಕೇವಲ ಒಂದು ಸಾಹಿತ್ಯವಲ್ಲ. ಈ ಸಾಹಿತ್ಯದ ಲೇಖಕನು ಒಬ್ಬ ಕಾರ್ಯಕರ್ತನಾಗಿದ್ದಾನೆ. ದಲಿತ ಸಾಹಿತ್ಯವನ್ನು ಸಾಮಾಜಿಕ ಪರಿವರ್ತನೆಗಾಗಿ ಬರೆಯಲಾಗುತ್ತದೆ. ದಲಿತ ಸಾಹಿತ್ಯವನ್ನು ಸಮಾಜಶಾಸ್ತ್ರೀಯ ದೃಷ್ಟಿಯಿಂದ ವಿಮರ್ಶೆ ಮಾಡಬೇಕಾಗುತ್ತದೆ.